ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 ದಿನಾಂಕ: 23–7–2015

## ಪತ್ರಿಕಾ ಪ್ರಕಟಣೆ

## ವಿಧಾನ ಮಂಡಲದ ಸುದ್ದಿಗಳು:

# ಸುಳ್ಳು ಜಾತಿ ಪ್ರಮಾಣ ಪತ್ರ : ಕಠಿಣ ಕ್ರಮ

**ಬೆಂಗಳೂರು, ಜುಲೈ 23 (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಸರ್ಕಾರಿ ನೌಕರಿ ಪಡೆದ ಅಧಿಕಾರಿ ಮತ್ತು ಸಿಬ್ಬಂದಿಗಳು 569 ಜನ ಆಗಿದ್ದಾರೆ ಎಂದು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಖಾತೆ ಸಚಿವ ಹೆಚ್. ಆಂಜನೇಯ ಅವರು ಇಂದು ವಿಧಾನಸಭೆಯಲ್ಲಿ ಮಹಾಲಕ್ಷ್ಮೀಲೇಔಟ್ ಶಾಸಕ ಕೆ. ಗೋಪಾಲಯ್ಯ ಅವರ ಪ್ರಶ್ನೆಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಸರ್ಕಾರಿ ಉದ್ಯೋಗ ಮತ್ತು ಶೈಕ್ಷಣಿಕ ಮೀಸಲಾತಿ ಪಡೆದವರ ವಿರುದ್ಧ ದೂರು ಮಾಹಿತಿ ಸಿಕ್ಕ ತಕ್ಷಣವೇ ವಿಚಾರಣೆ ಕೈಗೊಳ್ಳಲಾಗುತ್ತಿದೆ. ವಿಚಾರಣೆ ಸಾಬೀತಾದಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರವನ್ನು ರದ್ದುಪಡಿಸಿ ಅವರ ವಿರುದ್ಧ ಎಫ್.ಐ.ಆರ್. ದಾಖಲಿಸಿ ಆರೋಪಿತರನ್ನು ಬಂಧಿಸಿ, ಸೇವೆಯಿಂದ ವಜಾಗೊಳಿಸಲು ಕ್ರಮ ಕೈಗೊಂಡು ಅವರ ಆರ್ಥಿಕ ಸೌಲಭ್ಯವನ್ನು ಹಿಂಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಸರ್ಕಾರಿ ಸೌಲಭ್ಯ ಪಡೆದವರ ವಿರುದ್ಧ ಆರೋಪ ಸಾಬೀತಾದಲ್ಲಿ ಅವರ ವಿರುದ್ಧ ಈಗಾಗಲೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆ ಪ್ರಕಾರ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುತ್ತಿದೆ ಎಂದು ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ.

ಬಾಬು:ಜಿಪಿಆರ್.

## ಸಾಮಾಜಿಕ ಮತ್ತು ಶೈಕ್ಷಣಿಕ ಕಾರ್ಯ ಪೂರ್ಣ

**ಬೆಂಗಳೂರು, ಜುಲೈ 23 (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯು ಬೃಹತ್ ಬೆಂಗಳೂರು ಮಹಾನಗರಪಾಲಿಕೆಯನ್ನು ಹೊರತುಪಡಿಸಿ ಎಲ್ಲಾ ಜಿಲ್ಲೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಮುಕ್ತಾಯಗೊಂಡಿದೆ ಎಂದು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಖಾತೆ ಸಚಿವ ಹೆಚ್. ಆಂಜನೇಯ ಅವರು ಇಂದು ವಿಧಾನಸಭೆಯಲ್ಲಿ ಶಾಸಕ ಆರ್. ಅಶೋಕ್ ಅವರ ಪ್ರಶ್ನೆಗೆ ಪ್ರಶ್ನೋತ್ತರ ವೇಳೆಯಲ್ಲಿ ನೀಡಿದ ಉತ್ತರದಲ್ಲಿ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧಿನಿಯಮದನ್ವಯ ರಾಜ್ಯದ ಎಲ್ಲಾ ವರ್ಗಗಳ ಜಾತಿಗಳ, ಸಾಮಾಜಿಕ, ಶೈಕ್ಷಣಿಕ ಮತ್ತು ಔದ್ಯೋಗಿಕ ಸ್ಥಿತಿಗತಿಗಳ ಕುರಿತು ನಡೆಸಲಾದ ಸಮೀಕ್ಷೆಯ ಸಮಗ್ರ ಅಂಕಿ-ಅಂಶಗಳನ್ನು ಆಧರಿಸಿ ಹಿಂದುಳಿದ ವರ್ಗಗಳನ್ನು ಗುರುತಿಸಿ ಅವರ ಸರ್ವೋಮುಖ ಅಭಿವೃದ್ಧಿಗಾಗಿ ಪೂರಕವಾಗುವ ಕಾರ್ಯಕ್ರಮಗಳನ್ನು ರೂಪಿಸುವ ಉದ್ದೇಶದಿಂದ ಕೈಗೊಳ್ಳಲಾಗಿದೆ ಎಂದು ಸಚಿವರು ತಿಳಿಸಿದರು.

ಸಾಮಾಜಿಕ ಮತ್ತು ಶೈಕ್ಷಣಿಕ ಸಮಸ್ಯೆಗಳು ಜಿಲ್ಲೆಗಳಲ್ಲಿ ಪೂರ್ಣಗೊಂಡಿದೆ. ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ 21,16,949 ಕುಟುಂಬಗಳನ್ನು ಸಮೀಕ್ಷೆಗಾಗಿ ಗುರುತಿಸಿದ್ದು, ಈ ಪೈಕಿ 18.80 ಲಕ್ಷ (ಶೇ 88.82 ರಷ್ಟು) ಕುಟುಂಬಗಳ ಮಾಹಿತಿಯನ್ನು ಸಮೀಕ್ಷೆಯಡಿ ಸಂಗ್ರಹಿಸಲಾಗಿದೆ. ಉಳಿದ 2.37 ಲಕ್ಷ ಕುಟುಂಬಗಳಲ್ಲಿ ಬೀಗ ಹಾಕಿದ ಕುಟುಂಬಗಳು – 101846, ಮಾಹಿತಿ ನೀಡಲು ನಿರಾಕರಿಸಿದ ಕುಟುಂಬಗಳು – 21645 ವ್ಯಕ್ತಿಗಳು ತಾತ್ಕಾಲಿಕವಾಗಿ ವಾಸವಾಗಿರುವ ಸಾಂಸ್ಥಿಕ ವಸತಿ ನಿಲಯಗಳು, ಪಿ.ಜಿ. ಗೃಹಗಳು, ಹೋಟೆಲ್ ಮತ್ತು ಲಾಡ್ಜ್‌ಗಳಲ್ಲಿ – 113251 ಕುಟುಂಬಗಳು ಸೇರಿರುತ್ತವೆ ಎಂದು ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ.

ಬಾಬು:ಜಿಪಿಆರ್.

## ರಾಜ್ಯದಲ್ಲಿ 220 ನ್ಯಾಯಬೆಲೆ ಅಂಗಡಿ ಅಮಾನತ್ತು

**ಬೆಂಗಳೂರು, ಜುಲೈ 23 (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ಅನ್ನಭಾಗ್ಯ ಯೋಜನೆಯಡಿ ಉಚಿತವಾಗಿ ಅಕ್ಕಿ ವಿತರಿಸುತ್ತಿರುವ ನ್ಯಾಯಬೆಲೆ ಅಂಗಡಿಗಳಲ್ಲಿ ವ್ಯಾಪಕ ಅವ್ಯವಹಾರ ನಡೆಯುತ್ತಿದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಇಂದು ವಿಧಾನಸಭೆಯಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಪುಲಿಕೇಶಿನಗರ ಶಾಸಕ ಆರ್. ಅಖಂಡ ಶ್ರೀನಿವಾಸಮೂರ್ತಿ ಅವರ ಪ್ರಶ್ನೆಗೆ ಉತ್ತರಿಸುತ್ತಾ ತಿಳಿಸಿದರು.

ಅನ್ನಭಾಗ್ಯ ಯೋಜನೆಯ ಜಾರಿಯಾದ 2013 ರ ಜೂನ್‌ನಿಂದ ಪಡಿತರ ಪದಾರ್ಥಗಳನ್ನು ಸಮರ್ಪಕವಾಗಿ ಪಡಿತರ ಚೀಟಿದಾರರಿಗೆ ವಿತರಿಸದ ನ್ಯಾಯಬೆಲೆ ಅಂಗಡಿ, ಚಿಲ್ಲರೆ ಸೀಮೆಎಣ್ಣೆ ವಿತರಕರ ಮೇಲೆ ಕರ್ನಾಟಕ ಅಗತ್ಯ ವಸ್ತುಗಳ ನಿಯಂತ್ರಣ ಆದೇಶದಂತೆ ಕ್ರಮ ಕೈಗೊಳ್ಳಲಾಗುತ್ತಿದ್ದು, 220 ನ್ಯಾಯಬೆಲೆ

ಅಂಗಡಿಗಳನ್ನು ಅಮಾನತ್ತುಪಡಿಸಲಾಗಿದೆ. 10 ನ್ಯಾಯಬೆಲೆ ಅಂಗಡಿಗಳನ್ನು ರದ್ದುಪಡಿಸಲಾಗಿದೆ. 16 ನ್ಯಾಯಬೆಲೆ ಅಂಗಡಿಗಳಿಗೆ ಕಾರಣ ಕೇಳಿ ನೋಟೀಸ್ ನೀಡಲಾಗಿದೆ. 8 ನ್ಯಾಯಬೆಲೆ ಅಂಗಡಿ ವಿರುದ್ಧ ಅಮಾನತ್ತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ, 11 ನ್ಯಾಯಬೆಲೆ ಅಂಗಡಿಗಳ ಮೇಲೆ ಪ್ರಕರಣ ದಾಖಲಿಸಲಾಗಿದೆ, ಒಂದು ನ್ಯಾಯಬೆಲೆ ಅಂಗಡಿಗೆ ದಂಡ ವಿಧಿಸಲಾಗಿದೆ. ಐದು ನ್ಯಾಯಬೆಲೆ ಅಂಗಡಿಗಳಿಗೆ ಎಚ್ಚರಿಕೆ ನೀಡಲಾಗಿದೆ ಹಾಗೂ ಏಳು ಪ್ರಕರಣಗಳು ವಿಚಾರಣೆ ಹಂತದಲ್ಲಿದೆ ಎಂದು ಸಚಿವರು ಉತ್ತರಿಸಿದರು.

ಬಾಬು:ಜಿಪಿಆರ್.

## ಬ್ಯಾಕ್‌ಲಾಗ್ ಅನುಷ್ಠಾನ ದೂರು : ಅನ್ಯಾಯ ಸರಿಪಡಿಸಲು ಕ್ರಮ

**ಬೆಂಗಳೂರು, ಜುಲೈ 23 (ಕರ್ನಾಟಕ ವಾರ್ತೆ)**

ರಾಜ್ಯದ ಕೆಲವು ಇಲಾಖೆಗಳಲ್ಲಿ ಬ್ಯಾಕ್‌ಲಾಗ್ ಹುದ್ದೆ ತುಂಬುವಲ್ಲಿ ಮತ್ತು ಮುಂಬಡ್ತಿ ನೀಡುವಲ್ಲಿ ವಿಳಂಬ ಮತ್ತು ಅನ್ಯಾಯವಾಗಿದೆ ಎಂದು ಸಂಬಂಧಿಸಿದ ಇಲಾಖೆಯ ಸಿಬ್ಬಂದಿ ವರ್ಗದಿಂದ ದೂರುಗಳು ಬಂದಾಗ ಅವುಗಳನ್ನು ಕೂಡಲೇ ಪರಿಶೀಲಿಸಿ ಆಗೆರಬಹುದಾದ ಅನ್ಯಾಯವನ್ನು ಸರಿಪಡಿಸಲು ಕ್ರಮ ವಹಿಸಲಾಗುತ್ತಿದೆ ಎಂದು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಖಾತೆ ಸಚಿವ ಹೆಚ್. ಆಂಜನೇಯ ಅವರು ಇಂದು ವಿಧಾನಸಭೆಯಲ್ಲಿ ಮಳವಳ್ಳಿ ಕ್ಷೇತ್ರದ ಶಾಸಕ ಪಿ.ಎಂ. ನರೇಂದ್ರಸ್ವಾಮಿ ಅವರ ಪ್ರಶ್ನೆಗೆ ಪ್ರಶ್ನೋತ್ತರ ವೇಳೆಯಲ್ಲಿ ನೀಡಿದ ಉತ್ತರದಲ್ಲಿ ತಿಳಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆಗೆ ನೇಮಕಾಗಿ/ಮುಂಬಡ್ತಿ/ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಯಲ್ಲಿ ಅನ್ಯಾಯವಾಗಿರುವ ಬಗ್ಗೆ ಬರುವ ದೂರು/ಮನವಿಗಳನ್ನು ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ನಿಯಮಗಳು 1995 ರ ನಿಯಮ 10 ರನ್ವಯ ಇಲಾಖೆಯಿಂದ ತಪಾಸಣೆ ನಡೆಸಿ ವರದಿ ನೀಡಿ ನೇಮಕಾತಿ ಪ್ರಾಧಿಕಾರಿಗಳಿಗೆ 30 ದಿವಸಗಳ ಕಾಲಾವಕಾಶ ನೀಡಿ ನ್ಯೂನತೆಗಳನ್ನು ಸರಿಪಡಿಸಲು ನಿರ್ದೇಶನ ನೀಡಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

ನೇಮಕಾತಿ ಪ್ರಾಧಿಕಾರಿಯು ಮೀಸಲಾತಿ ಉಲ್ಲಂಘನೆ ಮಾಡಿದಲ್ಲಿ ಅಥವಾ ಮನವರಿಕೆಯಾಗುವಂತೆ ಸಮರ್ಥನೆ ನೀಡಲು ವಿಫಲರಾದಲ್ಲಿ ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಮಾಡಿದ ನೇಮಕಾತಿಯನ್ನು "ಶೂನ್ಯ" ವೆಂದು ಘೋಷಿಸಲು ಅವಕಾಶವಿರುತ್ತದೆ. ನೇಮಕಾತಿ ಪ್ರಾಧಿಕಾರಿಯು ತೃಪ್ತಿಕರ ಸಮರ್ಥನೆ ನೀಡುವಲ್ಲಿ ವಿಫಲರಾದಾಗ ನೇಮಕಜಾತಿ ಪ್ರಾಧಿಕಾರಿಯನ್ನು ಕಾನೂನು ಕ್ರಮಕ್ಕೆ (ಪ್ರಾಸಿಕ್ಯೂಷನ್‌ಗೆ) ಗುರಿಪಡಿಸಲು ಅವಕಾಶವಿರುತ್ತದೆ ಎಂದು ಸಚಿವರು ತಿಳಿಸಿದರು.

ಬಾಬು:ಜಿಪಿಆರ್.

# ಅಸಮರ್ಪಕ ಬೆಲೆ, ತೂಕ : 31,475 ಮೊಕದ್ದಮ್ಮೆ ದಾಖಲು

ಬೆಂಗಳೂರು, ಜುಲೈ 23 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ವ್ಯಾಪಾರಿಗಳು ನಿಗದಿತ ಬೆಲೆಗಿಂತ (ಎಂ.ಆರ್.ಪಿ.) ಹೆಚ್ಚಿನ ದರಕ್ಕೆ ಸರಕುಗಳನ್ನು ಮತ್ತು ಕಡಿಮೆ ತೂಕದ ಸರಕುಗಳನ್ನು ಮಾರಾಟ ಮಾಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. 2014-15 ನೇ ಸಾಲಿನಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಯ ಅಧಿಕಾರಿಗಳು 1,37,363 ತಪಾಸಣೆ ಕೈಗೊಂಡು 31,475 ಮೊಕದ್ದಮ್ಮೆಗಳನ್ನು ದಾಖಲಿಸಿ ರೂ. 6,97,98,000 ಅಭಿಸಂಧಾನ ಶುಲ್ಕ ವಸೂಲಿ ಮಾಡಿದ್ದಾರೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಖಾತೆ ರಾಜ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಇಂದು ವಿಧಾನಸಭೆಯಲ್ಲಿ ಬಂಗಾರಪೇಟೆ ಕ್ಷೇತ್ರದ ಶಾಸಕ ಎಸ್. ಎನ್. ನಾರಾಯಣಸ್ವಾಮಿ ಅವರ ಪ್ರಶ್ನೆಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ರಾಜ್ಯದಲ್ಲಿ 2014-15 ನೇ ಸಾಲಿನಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಯ ಅಧಿಕಾರಿಗಳು ಪೆಟ್ರೋಲ್ ಬಂಕ್‌ಗಳ ಮೇಲೆ 2700 ತಪಾಸಣೆಗಳನ್ನು ಕೈಗೊಂಡು 162 ಮೊಕದ್ದಮ್ಮೆಗಳನ್ನು ದಾಖಲಿಸಿದ್ದಾರೆ. ಪೆಟ್ರೋಲ್ ಬಂಕ್‌ಗಳಲ್ಲಿ ಅಳತೆಗಿಂತ ಕಡಿಮೆ ಪೆಟ್ರೋಲ್ ಮತ್ತು ಡೀಸಲ್ ನೀಡುತ್ತಿರುವವರ ವಿರುದ್ಧ ಎರಡು ಪ್ರಕರಣಗಳನ್ನು ದಾಖಲಿಸಲಾಗಿದೆ. ರಾಜ್ಯದಲ್ಲಿ ಒಟ್ಟು 2844 ಪೆಟ್ರೋಲ್ ಬಂಕ್‌ಗಳು ಇಂದು ಕಳೆದ ಸಾಲಿನಲ್ಲಿ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಅಧಿಕಾರಿಗಳು 308 ಪೆಟ್ರೋಲ್ ಬಂಕ್‌ಗಳ ತಪಾಸಣೆ ನಡೆಸಿದ್ದಾರೆ ಹಾಗೂ ಪೆಟ್ರೋಲ್ ಬಂಕ್‌ಗಳಲ್ಲಿ ಅಳತೆಗಿಂತ ಕಡಿಮೆ ಮತ್ತು ಕಲಬೆರಕೆ ಪೆಟ್ರೋಲ್, ಡೀಸಲ್ ವಿತರಿಸುತ್ತಿದ್ದ ಬಗ್ಗೆ ಪ್ರಕರಣಗಳನ್ನು ದಾಖಲಿಸಿದ್ದಾರೆ ಎಂದು ಸಚಿವರು ತಿಳಿಸಿದ್ದಾರೆ.

ಬಾಬು:ಜಿಪಿಆರ್

# ಶಿಕ್ಷಕರಿಗಾಗಿ ಕಮ್ಮಟ : ವರ್ಣಗಳು

ಬೆಂಗಳೂರು, ಜುಲೈ 23 (ಕರ್ನಾಟಕ ವಾರ್ತೆ)

ಬೆಂಗಳೂರು ಜವಾಹರ್‌ಲಾಲ್ ನೆಹರು ತಾರಾಲಯದಲ್ಲಿ ವರ್ಣಗಳಿಗೆ ಸಂಬಂಧಪಟ್ಟ ವೈಜ್ಞಾನಿಕ ವಿಷಯಗಳನ್ನು ಕ್ರಮಬದ್ಧವಾಗಿ ತಿಳಿಸಿಕೊಡುವುದು ಹಾಗೂ ಪ್ರೌಢಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರಗಳನ್ನೊಳಗೊಂಡ ಚಟುವಟಿಕೆ ಮತ್ತು ಪ್ರಯೋಗಗಳ ಮೂಲಕ ವರ್ಣಗಳ ಬಗ್ಗೆ ತಿಳಿಸುವುದಕ್ಕಾಗಿ ಶಿಕ್ಷಕರಿಗಾಗಿ ಕಮ್ಮಟ, ವರ್ಣಗಳು ಕಾರ್ಯಾಗಾರದ ಉದ್ದೇಶ.

ಕಾರ್ಯಾಗಾರದಲ್ಲಿ ಎಂಟರಿಂದ ಹತ್ತನೆಯ ತರಗತಿಯ ವಿಜ್ಞಾನ ಶಿಕ್ಷಕರು ಅರ್ಹರಾಗಿದ್ದು, ಜುಲೈ 23 ರಂದು ಬೆಳಿಗ್ಗೆ 10.30 ಮಧ್ಯಾಹ್ 3.30 ಗಂಟೆವರೆಗೆ ನಗರದ ಹೈಗ್ರೌಂಡ್ಸ್‌ನ ಟಿ. ಚೌಡಯ್ಯ ರಸ್ತೆಯ ಜವಾಹರ್‌ಲಾಲ್ ನೆಹರು ತಾರಾಲಯದಲ್ಲಿ ಹಮ್ಮಿಕೊಂಡಿದೆ.

ಭಾಗವಹಿಸುವಿಕೆಯನ್ನು ತಾರಾಲಯದ ಕಚೇರಿಯ ದೂರವಾಣಿ ಮುಖೇನ ಅಥವಾ ಮಿಂಚಂಚೆ infro@taralaya.org ಮೂಲಕ ಜುಲೈ 23 ರೊಳಗೆ ನೋಂದಾಯಿಸಿದವರು ಮಾತ್ರ ಪಾಲ್ಗೊಳ್ಳಬಹುದು. ಮೊದಲು ಬಂದವರಿಗೆ ಆದ್ಯತೆ.

ಹೆಚ್ಚಿನ ವಿವರಗಳಿಗಾಗಿ ದೂರವಾಣಿ – 2237 9725/2220 3234 ಅಥವಾ http://www.taralaya.org/announcements.php ಅನ್ನು ಸಂಪರ್ಕಿಸಬಹುದಾಗಿದೆ.

ಬಾಬು:ಜಿಪಿಆರ್.

# ಪೋಸ್ಟ್ ಡಿಪ್ಲೋಮಾ ಕೋರ್ಸ್ ಪ್ರವೇಶ

ಬೆಂಗಳೂರು, ಜುಲೈ 23 (ಕರ್ನಾಟಕ ವಾರ್ತೆ)

2015–16ನೇ ಸಾಲಿನಲ್ಲಿ ಕೆಳಕಂಡ ಪಾಲಿಟೆಕ್ನಿಕ್‌ಗಳಲ್ಲಿ ಬೋಧಿಸಲಾಗುವ ಪೋಸ್ಟ್ ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ.

ಸರ್ಕಾರಿ ಎಸ್.ಜೆ. ಪಾಲಿಟೆಕ್ನಿಕ್, ಬೆಂಗಳೂರು ನಲ್ಲಿ ಪೋಸ್ಟ್ ಡಿಪ್ಲೋಮಾ ಇನ್ ಕಂಪ್ಯೂಟರ್ ಅಪ್ಲಿಕೇಷನ್, ಸರ್ಕಾರಿ ಪಾಲಿಟೆಕ್ನಿಕ್, ಬಳ್ಳಾರಿಯಲ್ಲಿ ಪೋಸ್ಟ್ ಡಿಪ್ಲೋಮಾ ಇನ್ ಇಂಡಸ್ಟ್ರಿಯಲ್ ಸೇಫ್ಟಿ, ಎಂ.ಎಸ್. ರಾಮಯ್ಯ ಪಾಲಿಟೆಕ್ನಿಕ್, ಬೆಂಗಳೂರುನಲ್ಲಿ ಪೋಸ್ಟ್ ಡಿಪ್ಲೋಮಾ ಇನ್ ಸಾಫ್ಟ್‌ವೇರ್ ಟೆಸ್ಟಿಂಗ್, ರಾಜೀವ್‌ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಸ್ಟೀಲ್ ಟೆಕ್ನಾಲಜಿ, ತೋರಣಗಲ್, ಬಳ್ಳಾರಿ ಜಿಲ್ಲೆಯಲ್ಲಿ ಪೋಸ್ಟ್ ಡಿಪ್ಲೋಮಾ ಇನ್ ಇಂಡಸ್ಟ್ರಿಯಲ್ಲಿ ಸೇಫ್ಟಿ ಕೋರ್ಸ್‌ಗಳು.

ನಿಗದಿತ ಅರ್ಜಿಯನ್ನು ಮೇಲ್ಕಂಡ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರವರ ಕಚೇರಿಯಿಂದ ಜುಲೈ 25 ರವರೆಗೆ ಪಡೆಯಬಹುದಾಗಿದೆ. ಅರ್ಜಿ ಶುಲ್ಕ ಎಸ್.ಸಿ./ಎಸ್.ಟಿ. ಮತ್ತು ವರ್ಗ–1ರ ಅಭ್ಯರ್ಥಿಗಳಿಗೆ ರೂ. 50/– ಮತ್ತು ಸಾಮಾನ್ಯ ವರ್ಗದವರಿಗೆ ರೂ. 100/– ನಿಗದಿಪಡಿಸಲಾಗಿದೆ.

ಪ್ರವೇಶಕ್ಕೆ ಇರಬೇಕಾದ ಕನಿಷ್ಠ ವಿದ್ಯಾರ್ಹತೆ ಹಾಗೂ ಇತರೆ ಅರ್ಹತೆಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಪಾಲಿಟೆಕ್ನಿಕ್‌ಗಳಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಬಾಬು:ಜಿಪಿಆರ್.

# ಸಾರಿಗೆ ಅದಾಲತ್

ಬೆಂಗಳೂರು, ಜುಲೈ 23 (ಕರ್ನಾಟಕ ವಾರ್ತೆ)

ಬೆಂಗಳೂರು (ಉತ್ತರ) ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಬಿ.ಬಿ.ಎಂ.ಪಿ. ವಾಣಿಜ್ಯ ಸಂಕೀರ್ಣ, ಯಶವಂತಪುರ, ಬೆಂಗಳೂರು – 560 022, ಇಲ್ಲಿ ಜುಲೈ 25 ರಂದು ಮಧ್ಯಾಹ್ನ 3–00 ಗಂಟೆಗೆ "ಸಾರಿಗೆ ಅದಾಲತ್" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮದಲ್ಲಿ ಕಚೇರಿಗೆ ಸಂಬಂಧಪಟ್ಟಂತೆ ಸಾರ್ವಜನಿಕರ ಕುಂದುಕೊರತೆಗಳನ್ನು ಸ್ವೀಕರಿಸಿ ಕಾನೂನು ರೀತ್ಯ ಸೂಕ್ತ ಪರಿಹಾರಗಳನ್ನು ಸೂಚಿಸಲಾಗುವುದು. ಹಾಗೂ ಈ ಕಾರ್ಯಕ್ರಮದಲ್ಲಿ ಸಾರಿಗೆ ಇಲಾಖೆಯ ಉನ್ನತ ಅಧಿಕಾರಿಗಳು ಭಾಗವಹಿಸಲಿದ್ದಾರೆ.

ಬಾಬು:ಜಿಪಿಆರ್.

# ವಾರ್ಡರ್ ಹುದ್ದೆಗೆ ನೇಮಕಾತಿ

ಬೆಂಗಳೂರು, ಜುಲೈ 23 (ಕರ್ನಾಟಕ ವಾರ್ತೆ)

ಕರ್ನಾಟಕದ ಕಾರಾಗೃಹಗಳ ಇಲಾಖೆಯಲ್ಲಿ ಖಾಲಿ ಇರುವ 320 ಸಂಖ್ಯೆ ವಾರ್ಡರ್ ಹುದ್ದೆಗಳಿಗೆ ನೇಮಕಾತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಇಲಾಖೆಯ ವೆಬ್‌ಸೈಟ್ www.karnatakakaprisons.in ಮುಖಾಂತರ ಆನ್‌ಲೈನ್ ನಲ್ಲಿ ಜುಲೈ 28 ರ ಸಂಜೆ 6–00 ಗಂಟೆವರೆಗೆ ಅರ್ಜಿಗಳನ್ನು ಆಹ್ವಾನಿಸಿದೆ.

ಬಾಬು:ಜಿಪಿಆರ್.

# ಮಿಲಿಟರಿ ಶಾಲೆ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಜುಲೈ 23 (ಕರ್ನಾಟಕ ವಾರ್ತೆ)

ಉತ್ತರಾಖಂಡ ರಾಜ್ಯದ ಡೆಹಾರಡೂನಲ್ಲಿರುವ ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜ್, ಇಲ್ಲಿ 8 ನೇ ತರಗತಿಗಾಗಿ ಪ್ರವೇಶ ಬಯಸುವ ಕರ್ನಾಟಕ ರಾಜ್ಯದ ಬಾಲಕರಿಗೆ ಅರ್ಹತಾ ಪ್ರವೇಶ ಪರೀಕ್ಷೆಯನ್ನು ಬೆಂಗಳೂರು ಕೇಂದ್ರದಲ್ಲಿ ದಿನಾಂಕ 01 ಡಿಸೆಂಬರ್ ಮತ್ತು 02 ಡಿಸೆಂಬರ್ 2015 ರಂದು ನಡೆಸಲಾಗುವುದು. ಅಭ್ಯರ್ಥಿಗಳು ಯಾವುದೇ ಸರ್ಕಾರದಿಂದ ಮಾನ್ಯತೆ ಪಡೆದಿರುವ ಶಾಲೆಯಲ್ಲಿ 7 ನೇ ತರಗತಿಯಲ್ಲಿ ಓದುತ್ತಿರುವ ಅಥವಾ ಉತ್ತೀರ್ಣರಾಗಿರುವ ಹಾಗೂ ದಿನಾಂಕ 01-07-2016 ರಂತೆ ಹನ್ನೊಂದುವರೆ ವರ್ಷದಿಂದ 13 ವರ್ಷದೊಳಗಿನ (ಅಂದರೆ ದಿನಾಂಕ 02-07-2003 ರಿಂದ 01-01-2005 ರೊಳಗೆ ಜನಿಸಿರುವ) ಬಾಲಕರು ಮಾತ್ರ ಸದರಿ ಪ್ರವೇಶ ಪರೀಕ್ಷೆಗೆ ಅರ್ಹರಿರುತ್ತಾರೆ. ಈ ಸಂಸ್ಥೆಯ ಮುಖ್ಯ ಗುರಿ ಯುವಕರನ್ನು ದೇಶದ ಸಶಸ್ತ್ರ ಪಡೆಗೆ ಸೇರಲು ಸಿದ್ಧಗೊಳಿಸುವುದು ಹಾಗೂ ಈ ನಿಟ್ಟಿನಲ್ಲಿ ಯುವಕರಿಗೆ ಸರ್ವ ರೀತಿಯ ವಿದ್ಯಾಭ್ಯಾಸ/ತರಬೇತಿ ನೀಡುವುದು. ಕಾಲೇಜಿನಲ್ಲಿ ವರ್ಷವೊಂದಕ್ಕೆ ಪ್ರಸ್ತಕ ವಿದ್ಯಾಭ್ಯಾಸ ಶುಲ್ಕ ರೂ. 42,400/- ಆಗಿರುತ್ತದೆ.

ವಿವರಣ ಪತ್ರ ಹಾಗೂ ಹಳೇ ಪ್ರಶ್ನೆ ಪತ್ರಿಕೆಗಳನ್ನೊಂಡ ಅರ್ಜಿ ನಮೂನೆಯನ್ನು ಕೋರಿಕೆ ಪತ್ರದ ಮೇರೆಗೆ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಭವನ, ನಂ 58, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ರಸ್ತೆ, ಬೆಂಗಳೂರು – 560 025, ಇಲ್ಲಿಂದ " **The Commendant RIMC DEHRADUN" payable at SBI TEL BHAVAN, DEHRADUN BANK CODE NO. 01576)** ಇವರ ಹೆಸರಿನಲ್ಲಿ ರೂ 430/- (ಸಾಮಾನ್ಯ ಅಭ್ಯರ್ಥಿಗಳಿಗೆ) ಮತ್ತು ರೂ. 385/- (ಎಸ್.ಸಿ/ಎಸ್‌ಟಿ ಅಭ್ಯರ್ಥಿಗಳಿಗೆ) ಡಿಮಾಂಡ್ ಡ್ರಾಫ್ಟ್ ಮೂಲಕ ಖುದ್ದಾಗಿ ಪಡೆಯಬಹುದಾಗಿದೆ.

ರಿಜಿಸ್ಟರ್ಡ್ ಪಾರ್ಸಲ್ ಮೂಲಕ ಅರ್ಜಿ ನಮೂನೆಗಳನ್ನು ಪಡೆಯಲಿಚ್ಚಿಸಲಿರುವ ಅಭ್ಯರ್ಥಿಗಳು ಮೇಲೆ ತಿಳಿಸಿದ ಬ್ಯಾಂಕ್ ಡ್ರಾಫ್ಟ್‌ನೊಂದಿಗೆ 11' X 9" ಅಳತೆ ಸೈಜಿನ ಸ್ವವಿಳಾಸದ ಲಕೋಟೆಯ ಮೇಲೆ ರೂ 40/- ಮೌಲ್ಯದ ಅಂಚೆ ಚೀಟಿ ಲಗತ್ತಿಸಿ ಕಳುಹಿಸಬೇಕು. ಲಕೋಟೆಯ ಮೇಲೆ ಅಭ್ಯರ್ಥಿಯ ಪೂರ್ಣ ಅಂಚೆ ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.

ಭರ್ತಿಮಾಡಿದ ನಿಗದಿತ ಅರ್ಜಿ ನಮೂನೆಯನ್ನು ದ್ವಿಪ್ರತಿಯಲ್ಲಿ ಅಡಕಗಳೊಂದಿಗೆ ಸೆಪ್ಟೆಂಬರ್ 30 ರೊಳಗಾಗಿ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು ಇವರಿಗೆ ಕಂಡಿಕೆ (2) ರಲ್ಲಿ ತಿಳಿಸಿರುವ ವಿಳಾಸಕ್ಕೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ 080 – 25589459 ಸಂಪರ್ಕಿಸಲು ಕೋರಿದೆ.

ಬಾಬು:ಜಿಪಿಆರ್.

# ಸಾರಿಗೆ ಪ್ರಾಧಿಕಾರದ ನಿರ್ಣಯ

ಬೆಂಗಳೂರು, ಜುಲೈ 23 (ಕರ್ನಾಟಕ ವಾರ್ತೆ)

ಬೆಂಗಳೂರು ನಗರ ಜಿಲ್ಲೆ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಜುಲೈ 13 ರಂದು ನಡೆಸಿದ ಪ್ರಾಧಿಕಾರದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಸಾರಿಗೆ ಪ್ರಯಾಣಿಕ ವಾಹನಗಳಾದ ಮಜಲು ವಾಹನಗಳು, ಒಪ್ಪಂದ ವಾಹನಗಳು, ಅಖಿಲ ಭಾರತ ಪ್ರವಾಸ ವಾಹನಗಳು ಹಾಗೂ

ಶಾಲಾ ವಾಹನಗಳಲ್ಲಿ ಮಕ್ಕಳ ಪ್ರಯಾಣದ ಸುರಕ್ಷತೆ ದೃಷ್ಟಿಯಿಂದ ಕಡ್ಡಾಯವಾಗಿ ತುರ್ತು ನಿರ್ಗಮನ ದ್ವಾರವನ್ನು ಅಳವಡಿಸಲು ಮತ್ತು ಎಲ್ಲಾ ರೀತಿಯ ಸಾರಿಗೆ ವಾಹನಗಳು ಕರ್ಕಶ ಹಾರನ್ ಹೊಂದಿರುವುದನ್ನು ನಿಷೇಧಿಸಿ ಆದೇಶಿಸಿದೆ. ಈ ನಿರ್ಣಯವನ್ನು ರಹದಾರಿ ನೀಡುವ ಸಂದರ್ಭದಲ್ಲಿ ಹೆಚ್ಚುವರಿ ನಿಬಂಧನೆಯೊಂದಿಗೆ ಅಡಕಗೊಳಿಸಲು ಆದೇಶಿಸಲಾಗಿದೆ.

ಶಾಲಾ ಮಕ್ಕಳ ಸುರಕ್ಷತೆಯ ಹಿತದೃಷ್ಟಿಯಿಂದ ಸರ್ವೋಚ್ಛ ನ್ಯಾಯಾಲಯವು ನೀಡಿದ ತೀರ್ಪು ಹಾಗೂ ಕರ್ನಾಟಕ ಸರ್ಕಾರದ ಆದೇಶವನ್ನು ಗಮನದಲ್ಲಿಟ್ಟುಕೊಂಡು ರಸ್ತೆ ಸುರಕ್ಷತಾ ಸಮಿತಿಯು ದಿನಾಂಕ 13–07–2015 ರಿಂದ ಹೊಸದಾಗಿ ನೋಂದಣಿಯಾಗುವ ಶಿಕ್ಷಣ ಸಂಸ್ಥೆ/ಶಾಲಾ ವಾಹನಗಳಿಗೆ ಕಡ್ಡಾಯವಾಗಿ ಜಿ.ಪಿ.ಎಸ್. (Global Positioning System) ಸಾಧನವನ್ನು ಅಳವಡಿಸಲು ಹಾಗೂ ಈಗಾಗಲೇ ನೋಂದಾಯಿಸಲಾದ ಶಿಕ್ಷಣ ಸಂಸ್ಥೆ/ಶಾಲಾ ವಾಹನಗಳಿಗೆ ದಿನಾಂಕ 13–07–2015 ರಿಂದ 12–10–2015 ರೊಳಗಾಗಿ ಜಿ.ಪಿ.ಎಸ್. (Global Positioning System) ಸಾಧನವನ್ನು ಅಳವಡಿಸಿ ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಕಚೇರಿಯಿಂದ ದೃಢೀಕರಣ ಪಡೆಯುವಂತೆ ಶಿಕ್ಷಣ ಸಂಸ್ಥೆಗಳಿಗೆ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯು ಸೂಚಿಸಿದೆ.

ಬೆಂಗಳೂರು ನಗರದಲ್ಲಿನ ರಸ್ತೆಗಳಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಅವೈಜ್ಞಾನಿಕವಾಗಿ ಮತ್ತು ಅಸಮರ್ಪಕವಾಗಿ ನಿರ್ವಹಿಸಲ್ಪಟ್ಟಿರುವ ರಸ್ತೆ ವಿಭಜಕಗಳನ್ನು ಮತ್ತು ಅಪಘಾತ ವಲಯಗಳನ್ನು 3 ತಿಂಗಳೊಳಗಾಗಿ ಗುರುತಿಸಿ ಕ್ರಮಕೈಗೊಂಡು ವರದಿ ನೀಡಲು ಲೋಕೋಪಯೋಗಿ ಇಲಾಖೆ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಮತ್ತು ಪೊಲೀಸ್ ಇಲಾಖೆ (ಸಂಚಾರ) ಗಳಿಗೆ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯು ಸೂಚಿಸಿ ನಿರ್ಣಯಿಸಿದೆ.

ಬಾಬು:ಜಿಪಿಆರ್.

## ಈ ಶನಿವಾರದ ಬೆಳ್ಳಿ ಸಿನಿಮಾ – ಡಿಸೆಂಬರ್ – 1
## ಚಿತ್ರ ನಿರ್ದೇಶಕ ಪಿ. ಶೇಷಾದ್ರಿ

ಬೆಂಗಳೂರು, ಜುಲೈ 23 (ಕರ್ನಾಟಕ ವಾರ್ತೆ)

ಕರ್ನಾಟಕ ಚಲನಚಿತ್ರ ಅಕಾಡೆಮಿಯು ಕಳೆದ ಶನಿವಾರ ನೂತನವಾಗಿ ಪ್ರಾರಂಭಿಸಿರುವ ಬೆಳ್ಳಿ ಸಿನಿಮಾ – ಬೆಳಿಮಾತು ಕಾರ್ಯಕ್ರಮದಲ್ಲಿ ಬರುವ ಶನಿವಾರ ಜುಲೈ 25 ರಂದು 4–00 ಗಂಟೆಗೆ ಬೆಂಗಳೂರು ಮಿಲ್ಲರ್ಸ್ ರಸ್ತೆಯ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಕನ್ನಡ ಚಿತ್ರರಂಗದ ನಿರ್ದೇಶಕ ಪಿ. ಶೇಷಾದ್ರಿ ಅವರ ಡಿಸೆಂಬರ್ – 1 ಚಲನಚಿತ್ರ ಪ್ರದರ್ಶನ ಹಾಗೂ ಸಂವಾದ ಕಾರ್ಯಕ್ರಮ ನಡೆಯಲಿದೆ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್.ಬಿ. ದಿನೇಶ್ ತಿಳಿಸಿದ್ದಾರೆ.

ಈ ಸಮಾರಂಭದ ಅಧ್ಯಕ್ಷತೆಯನ್ನು ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಹಾಗೂ ಕನ್ನಡ ಚಲನಚಿತ್ರ ರಂಗದ ಹಿರಿಯ ನಿರ್ದೇಶಕ ಎಸ್.ವಿ. ರಾಜೇಂದ್ರಸಿಂಗ್ ಬಾಬು ವಹಿಸುವರು. ಅಂದಿನ ಕಾರ್ಯಕ್ರಮದಲ್ಲಿ

ಡಿಸೆಂಬರ್ – 1 ಚಿತ್ರ ತಂಡದ ಹೆಚ್.ಜಿ. ದತ್ತಾತ್ರೇಯ, ಕುಮಾರಿ. ನಿವೇದಿತಾ, ಸಂತೋಷ್ ಉಪ್ಪಿನ ಹಾಗೂ ಸಿ.ಆರ್. ಶಶಿಕುಮಾರ್ ಅವರು ಪಾಲ್ಗೊಳ್ಳುವರು. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ ಎಂದು ರಿಜಿಸ್ಟ್ರಾರ್ ಹೆಚ್.ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಬಾಬು:ಜಿಪಿಆರ್.

# ಜಿ.ಪಿ.ಎಫ್ : 2014–15 ವಾರ್ಷಿಕ ವಿವರ ವೆಬ್‌ನಲ್ಲಿ ಲಭ್ಯ

ಬೆಂಗಳೂರು, ಜುಲೈ 23 (ಕರ್ನಾಟಕ ವಾರ್ತೆ)

ಕರ್ನಾಟಕ ಸರ್ಕಾರ ಅಖಿಲ ಭಾರತೀಯ ಸೇವಾನಿರತ (ಎ.ಐ.ಎಸ್) ಅಧಿಕಾರಿಗಳ, ರಾಜ್ಯ ಶ್ರೇಷ್ಠ ನ್ಯಾಯಾಲಯ ನ್ಯಾಯಾಧೀಶರುಗಳ ಹಾಗೂ ರಾಜ್ಯ ಸರ್ಕಾರದ ಇತರ ಇಲಾಖಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಕರ್ನಾಟಕ ಭವಿಷ್ಯ ನಿಧಿಯ 2014–15 ಸಾಲಿನ ಲೆಕ್ಕತ:ಖ್ತೆಗಳನ್ನು ಅಕೌಂಟೆಂಟ್ ಜನರಲ್ ಕರ್ನಾಟಕ ಕಚೇರಿಯ ವೆಬ್‌ಸೈಟ್ **http://www.agkar.cag.gov.in** ವಿಳಾಸದಿಂದ ಪಡೆಯಬಹುದಾಗಿದೆ ಎಂದು ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುಜಾರಿ), ಕರ್ನಾಟಕ, ಬೆಂಗಳೂರು ತಿಳಿಸಿದ್ದಾರೆ.

ವಂತಿಗೆದಾರರ ಅನುಕೂಲಕ್ಕಾಗಿ ಸಾಮಾನ್ಯ ಭವಿಷ್ಯ ನಿಧಿಯ ವಾರ್ಷಿಕ ಲೆಕ್ಕತ:ಖ್ತೆಗಳನ್ನು ಹೆಚ್.ಆರ್.ಎಮ್.ಎಸ್. ವೆಬ್‌ಸೈಟ್ **http://www.hrms.karnataka.gov.in** ದಿಂದ ಸಂಬಂಧ ಪಟ್ಟಿ ಹಣ ಸೆಳೆಯುವ ಮತ್ತು ಬಡವಾಡೆ ಅಧಿಕಾರಿಗಳ ಮೂಲಕವೂ **(HRMS > MENU > HOME > M/s Report > Download GPF Statement)** ಪಡೆದುಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗಿದೆ.

ವಂತಿಗೆದಾರರಿಗೆ ವೆಬ್‌ಸೈಟ್‌ನಿಂದ ವಾರ್ಷಿಕ ಲೆಕ್ಕ ತ:ಖ್ತೆಗಳನ್ನು ಪಡೆಯಲು ತೊಂದರೆ ಎದುರಾದಲ್ಲಿ ಇ–ಮೇಲ್ ವಿಳಾಸ (agpf.kar.@nic.in ) ಕ್ಕೆ ಅಥವಾ ದೂರವಾಣಿ ಸಂಖ್ಯೆ 080–22640297/080–22640310 ಸಂಪರ್ಕಿಸಲು ಕೋರಲಾಗಿದೆ.

ವಂತಿಗೆದಾರರು ತಮ್ಮ ವಾರ್ಷಿಕ ಲೆಕ್ಕ ತ:ಖ್ತೆಯಲ್ಲಿ ವಂತಿಗೆ ಮತ್ತು ಮುಂಗಡೆದ ವಿಷಯವಾಗಿ ಏನಾದರೂ ಲೋಪದೋಷಗಳು ಕಂಡುಬಂದಲ್ಲಿ ವರಿಷ್ಠ ಲೇಖಾಧಿಕಾರಿ (ಇ.ಡಿ.ಪಿ–ಜಿ.ಪಿ.ಎಫ್) ಅಥವಾ ವರಿಷ್ಠ ಲೇಖಾಧಿಕಾರಿ (ಎಫ್.ಎಂ.) ಪ್ರಧಾನ ಮಹಾಲೇಖಾಪಾಲರ ಕಚೇರಿ (ಲೆಕ್ಕ ಮತ್ತು ಹಕ್ಕುದಾರಿ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು ಇವರಿಗೆ ಪತ್ರ ಮುಖೇನ ತಿಳಿಸಬಹುದಾಗಿದೆ. (ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಗಳು 080 – 22640310 / 080–226403013.

ಬಾಬು:ಜಿಪಿಆರ್.

# GPF : 2014-15 ACCOUNTS STATEMENT PUBLISHED IN WEB

**Bangalore, July 23 (Karnataka Information)**

**The Princiapl Accountant General (A&E) Karnataka, Park House Rod, Bengaluru- 560 001, informs that the Annual Accounts Statements for the year 2014-15 relating to General Provident Fund (GPF)of the All India Service Officers (Karnataka Cadra), Judges of High Court and Employees of Govt. of Karnataka, have ben uploaded in website.**

**The Principal Accountant General (A&E) hereby informs, that the Subscribers can access their GPF Annual Accounts Statement through AG Karnataka website http;//www.agkar.cag.gov.in and download the Annual statement for the year 2014-15.**

**In addition the GPF Annual Accounts Statement will be available for download at the Human Resource Management System (HRMS) websit of Govt. of Karnataka http://www.hrms. karnataka.gov.in by the concerned DDOs (by accessing HRMS > Menu > Home > MIS report > download GPF statement) for the benefit of the GPF subsribers.**

**In case of GPF subscribers experience any difficulty relating tolog in to the website, they may contact this office through e-mail fagpf.kar.@nic.in) or Phone (08-22640310/080-22640297.**

**In case of any discrepancy in accounting the subscription and withdrawals in their GpF Accounts, the Subscribers may write to Senior Accounts Officer / EDP-GPF of Senior Accounts/FM, Office of the Principal Accountant General (A&E), Karnataka. Park House Road, Bengaluru – 560 001. (Contact Numbers 22640310/080-22640313).**

**babu:gpr**